KAMS610017942019

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ., ಪಿರಿಯಾಪಟ್ಟಣ.**

**ಉಪಸ್ಥಿತಿಃ**

**ಶ್ರೀಮತಿ. ಶ್ವೇತ.ಜೆ., ಬಿ.ಕಾಂ., ಎಲ್.ಎಲ್.ಬಿ.,**
**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ.,**
**ಪಿರಿಯಾಪಟ್ಟಣ.**

**ಸಿ.ಸಿ.ಸಂಖ್ಯೆ.613/2019**

ದಿನಾಂಕ 7 ನೇ ಮಾರ್ಚ್ ಮಾಹೆ 2026

**ಫಿರ್ಯಾದಿದಾರರು** : ಸರ್ಕಾರದ ಪರವಾಗಿ ಬೆಟ್ಟದಪುರ ಠಾಣಾ ಆರಕ್ಷಕರು
(ಸಹಾಯಕ ಸರ್ಕಾರಿ ಅಭಿಯೋಜಕರು)

**-ವಿರುದ್ಧ-**

**ಆರೋಪಿ** : ಪ್ರಶಾಂತ್.ಎ.ಪಿ,
ಬಿನ್ ಪ್ರಕಾಶಶೆಟ್ಟಿ,
ವಯಸ್ಸು 37 ವರ್ಷ,
ವಾಸ.ಅತ್ತಿಗೋಡು ಗ್ರಾಮ,
ಪಿರಿಯಾಪಟ್ಟಣ ತಾಲ್ಲೂಕು.
(ಆರೋಪಿ ಪರ ಶ್ರೀ ಸಿ.ಎಸ್.ಎಂ ವಕೀಲರು)

| | |
|---|---|
| ಪ್ರಕರಣ ಹೂಡಿದ ದಿನಾಂಕ | 18.06.2016 |
| ಕೃತ್ಯ ನಡೆದ ದಿನಾಂಕ | 18.06.2016 |
| ಪ್ರಥಮ ವರ್ತಮಾನ ಮಾಹಿತಿದಾರರ ಹೆಸರು | ಡಾ.ರಾಮೇಶ್ವರಪ್ಪ.ಕೆ. |
| ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | 14.10.2019 |
| ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | 22.12.2025 |

| | |
|---|---|
| ತೀರ್ಪು ನೀಡಿದ ದಿನಾಂಕ | 07.03.2026 |
| ಆರೋಪಿಗಳ ವಿರುದ್ದ ಮಾಡಲಾದ ಆರೋಪ | ಅಗತ್ಯ ವಸ್ತುಗಳ ಕಾಯ್ದೆ ಕಲಂ 3 ಮತ್ತು 7 ಹಾಗೂ ಭಾ.ದಂ.ಸಂ.ಕಲಂ. 420 |
| ನ್ಯಾಯಾಧೀಶರ ತೀರ್ಮಾನ | ಬಿಡುಗಡೆಗೊಳಿಸಲಾಯಿತು |
| ಪಿರ್ಯಾದುದಾರರನ್ನು ಪ್ರತಿನಿಧಿಸು ವಕೀಲರು | ಸ.ಸ.ಅ. |
| ಆರೋಪಿಗಳನ್ನು ಪ್ರತಿನಿಧಿಸುವ ವಕೀಲರು | ಆರೋಪಿ ಪರ ಶ್ರೀ ಸಿ.ಎಸ್.ಎಂ ವಕೀಲರು |

**(ಶ್ವೇತ.ಜೆ)**
**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.,**
**ಪಿರಿಯಾಪಟ್ಟಣ.**

## ತೀರ್ಪು

ಬೆಟ್ಟದಪುರ ಪೊಲೀಸ್ ಠಾಣಾ ಆರಕ್ಷಕ ನಿರೀಕ್ಷಕರು ಆರೋಪಿ ವಿರುದ್ದ ಅಗತ್ಯ ವಸ್ತುಗಳ ಕಾಯ್ದೆ ಕಲಂ 3 ಮತ್ತು 7 ಹಾಗೂ ಭಾ.ದಂ.ಸಂ.ಕಲಂ. 420 ರ ಅಡಿಯಲ್ಲಿ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನೆಯವರ ಪ್ರಕರಣದ ಸಾರಾಂಶ ಈ ಕೆಳಕಂಡಂತೆ ಇರುತ್ತದೆ:-**

ದಿನಾಂಕ.18.06.2016 ರಂದು ಮಧ್ಯಾಹ್ನ 2.45 ಗಂಟೆಯ ಸಮಯದಲ್ಲಿ ಬೆಟ್ಟದಪುರ ಪೊಲೀಸ್ ಠಾಣಾ ಸರಹದ್ದು, ಅತ್ತಿಗೋಡು ಗ್ರಾಮದ ಆರೋಪಿ ಪ್ರಶಾಂತ್ ರವರ ಮನೆಯಲ್ಲಿ ಚಾಸಾ.1 ರವರು ಚಾಸಾ.2 ಮತ್ತು 3 ರವರೊಂದಿಗೆ ಪಂಚಾಯ್ತಿದಾರರಾದ ಚಾಸಾ.4, 5 ಮತ್ತು 6 ರವರ ಸಮಕ್ಷಮ ದಾಳಿ ಮಾಡಿದ್ದು, ಆರೋಪಿಯು ಕರ್ನಾಟಕ ಸರ್ಕಾರದ ಪಡಿತರ ಚೀಟಿದಾರರಿಗೆ ಅನ್ನಭಾಗ್ಯ ಯೋಜನೆ ಅಡಿಯಲ್ಲಿ ಉಚಿತವಾಗಿ ನೀಡುತ್ತಿರುವ ಅಕ್ಕಿ ಮತ್ತು ಗೋದಿಯನ್ನು ಅಕ್ರಮವಾಗಿ

ಕಾಳಸಂತೆಯಲ್ಲಿ ಖರೀದಿಸಿ, ದಾಸ್ತಾನು ಮಾಡಿದ್ದು, ದಾಸ್ತಾನು ಮಾಡಿದ್ದ 13.47 ಕ್ವಿಂಟಾಲ್ ಪಡಿತರ ಅಕ್ಕಿ ಮತ್ತು 12.16 ಕ್ವಿಂಟಾಲ್ ಪಡಿತರ ಗೋದಿಯನ್ನು ಅಕ್ರಮವಾಗಿ ಹೆಚ್ಚಿನ ಲಾಭಕ್ಕೆ ಮಾರಾಟ ಮಾಡುವ ಉದ್ದೇಶದಿಂದ ತನ್ನ ಬಾಬ್ತು ಕೆಎ-45-5143 ರ ನೊಂದಣಿಯ ಬುಲೆರೋ ಗೂಡ್ಸ್ ವಾಹನದಲ್ಲಿ ತುಂಬುತ್ತಿದ್ದುದು ಹಾಗೂ ಆರೋಪಿಯು ಕರ್ನಾಟಕ ಸರ್ಕಾರ ಪಡಿತರ ಚೀಟಿದಾರರಿಗೆ ಉಚಿತವಾಗಿ ನೀಡುತ್ತಿರುವ ಅಕ್ಕಿ ಮತ್ತು ಗೋದಿಯನ್ನು ಅಕ್ರಮವಾಗಿ ಖರೀದಿಸಿ ದಾಸ್ತಾನು ಮಾಡಿ ದುರ್ಬಳಕೆ ಮಾಡುವ ಮುಖೇನ ಸರ್ಕಾರಕ್ಕೆ ವಂಚನೆ ಮಾಡಿರುತ್ತಾರೆ ಎಂದು ದೂರನ್ನು ಸಲ್ಲಿಸಿರುತ್ತಾರೆ.

**3.** ದಿನಾಂಕ 18.08.2016 ರಂದು ಚಾಸಾ.18-ಚಿಕ್ಕಸ್ವಾಮಿ ಪಿಎಸ್ಐ ರವರು ಚಾಸಾ.1-ಡಾ.ರಾಮೇಶ್ವರಪ್ಪ.ಕೆ.ರವರು ನೀಡಿದ ದೂರನ್ನು ಪಡೆದುಕೊಂಡು, ಠಾಣಾ ಅಪರಾಧ ಸಂಖ್ಯೆ:91/2016 ರಂತೆ ಅಗತ್ಯ ವಸ್ತುಗಳ ಕಾಯ್ದೆ ಕಲಂ 3 ಮತ್ತು 7 ಮತ್ತು ಭಾ.ದಂ.ಸಂ.ಕಲಂ. 420 ರ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿ ತನಿಖೆ ಪೂರೈಸಿ, ಆರೋಪಿಯ ವಿರುದ್ದ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**4.** ದೋಷರೋಪಣಾ ಪಟ್ಟಿಯನ್ನು ಸ್ವೀಕರಿಸಿ, ಆರೋಪಿಯು ಮಾಡಿದ ಅಪರಾಧಕ್ಕಾಗಿ ಅಗತ್ಯ ವಸ್ತುಗಳ ಕಾಯ್ದೆ ಕಲಂ 3 ಮತ್ತು 7 ಮತ್ತು ಭಾ.ದಂ.ಸಂ.ಕಲಂ.420 ಗಳಿಗೆ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು. ಆರೋಪಿಯು ವಕೀಲರನ್ನು ನೇಮಿಸಿಕೊಂಡು ಜಾಮೀನು ಪಡೆದುಕೊಂಡಿರುತ್ತಾರೆ. ಆರೋಪಿಯು ಅಭಿಯೋಜನೆಯವರ ದಾಖಲೆಗಳನ್ನು ದಂಡ ಪ್ರಕ್ರಿಯಾ ಸಂಹಿತೆ

ಕಲಂ.207 ರಡಿಯಲ್ಲಿ ಪೂರೈಸಲಾಗಿರುತ್ತದೆ. ಆರೋಪಿ ಮೇಲೆ ಮಾಡಿದ ಆರೋಪಕ್ಕೆ ದೋಷಾರೋಪಣಾ ಪಟ್ಟಿಯನ್ನು ಭಾರತೀಯ ದಂಡ ಸಂಹಿತೆ ಕಲಂ 420 ಮತ್ತು ಅಗತ್ಯ ವಸ್ತುಗಳ ಕಾಯ್ದೆ ಕಲಂ 3 ಮತ್ತು 7 ರಂತೆ ರಚಿಸಿ ಓದಿ ಹೇಳಲಾಯಿತು. ಆರೋಪಿ ತನ್ನ ತಪ್ಪನ್ನು ಒಪ್ಪಿಕೊಳ್ಳದೆ ವಿಚಾರಣೆ ಆಗಬೇಕೆಂದು ಕೇಳಿದ ಕಾರಣ ಪ್ರಕರಣವನ್ನು ವಿಚಾರಣೆಗೆ ಮುಂದೂಡಲಾಯಿತು.

**5.** ಆರೋಪಿಯ ವಿರುದ್ದ ಮಾಡಿರುವ ಆರೋಪಗಳನ್ನು ಸಾಭೀತುಪಡಿಸುವ ಉದ್ದೇಶದಿಂದ ಮಾನ್ಯ ಅಭಿಯೋಜನೆಯು ತನ್ನ ಪರವಾಗಿ ದೋಷಾರೋಪಣಾ ಪಟ್ಟಿಯಲ್ಲಿ ನಮೂದಿಸಿರುವ 18 ಸಾಕ್ಷಿಗಳ ಪೈಕಿ, 16 ಸಾಕ್ಷಿಗಳನ್ನು ಪ್ರಾಸಾ.1 ರಿಂದ ಪ್ರಾಸಾ.16 ರಂತೆ ವಿಚಾರಣೆಗೆ ಒಳಪಡಿಸಿ ಮತ್ತು ನಿಪಿ.1 ರಿಂದ 20 ದಾಖಲೆಗಳನ್ನು ತಮ್ಮ ಪರ ನಿಶಾನೆಯಾಗಿ ಗುರುತಿಸಿಕೊಂಡಿರುತ್ತಾರೆ. ತಮ್ಮ ಪರ ಸಾಕ್ಷಿಗಳ ವಿಚಾರಣೆಯನ್ನು ಮುಕ್ತಾಯಗೊಳಿಸಿಕೊಂಡಿರುತ್ತದೆ. ನಂತರ ಮಾನ್ಯ ಅಭಿಯೋಜನೆಯ ಪರ ಸಾಕ್ಷ್ಯದಲ್ಲಿ ಆರೋಪಿಗೆ ವಿರುದ್ದವಾದ ಸನ್ನಿವೇಶಗಳನ್ನು ಅವರಿಗೆ ಓದಿ ಹೇಳಿ, ಅವರು ನೀಡಿದ ಉತ್ತರಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರ ಅಡಿಯಲ್ಲಿ ವಿಚಾರಣಾ ಕಾಲಕ್ಕೆ ನಮೂದಿಸಿಕೊಂಡಿರುತ್ತದೆ. ಆರೋಪಿಯು ತನ್ನ ತಮ್ಮ ಪರ ಯಾವುದೇ ಮೌಖಿಕ ಅಥವಾ ದಾಖಲೆಗಳು ಸಾಕ್ಷ್ಯವಿಲ್ಲವೆಂದು ನುಡಿದ ಕಾರಣ, ಅವರ ಪರ ಪ್ರತಿರಕ್ಷಾ ಸಾಕ್ಷ್ಯ ಇಲ್ಲವೆಂದು ಪರಿಗಣಿಸಿ, ವಾದ-ವಿವಾದಗಳನ್ನು ಕೇಳಿದ ನಂತರ, ಪ್ರಕರಣವನ್ನು ತೀರ್ಪಿಗೆಂದು ಕೈಗೆತ್ತಿಕೊಳ್ಳಲಾಯ್ತು.

6. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಕೇಳಲಾಯಿತು.

**7. ಈ ಕೆಳಕಂಡ ಅಂಶಗಳು ನನ್ನ ಪರಿಗಣನೆಗೆ ಉದ್ಭವಿಸಿರುತ್ತವೆ.**

**ಅಂಶಗಳು**

**1 ನೇ ಅಂಶಃ** ದಿನಾಂಕ.18.06.2016 ರಂದು ಮಧ್ಯಾಹ್ನ 2.45 ಗಂಟೆಯ ಸಮಯದಲ್ಲಿ ಬೆಟ್ಟದಪುರ ಪೊಲೀಸ್ ಠಾಣಾ ಸರಹದ್ದು ಅತ್ತಿಗೋಡು ಗ್ರಾಮದ ಆರೋಪಿ ಪ್ರಶಾಂತ್ ರವರ ಮನೆಯಲ್ಲಿ ಚಾಸಾ.1 ರವರು ಚಾಸಾ.2 ಮತ್ತು 3 ರವರೊಂದಿಗೆ ಪಂಚಾಯ್ತಿದಾರರಾದ ಚಾಸಾ.4, 5 ಮತ್ತು 6 ರವರ ಸಮಕ್ಷಮ ದಾಳಿ ಮಾಡಿದ್ದು, ಆರೋಪಿಯು ಕರ್ನಾಟಕ ಸರ್ಕಾರದ ಪಡಿತರ ಚೀಟಿದಾರರಿಗೆ ಅನ್ನಭಾಗ್ಯ ಯೋಜನೆ ಅಡಿಯಲ್ಲಿ ಉಚಿತವಾಗಿ ನೀಡುತ್ತಿರುವ ಅಕ್ಕಿ ಮತ್ತು ಗೋದಿಯನ್ನು ಅಕ್ರಮವಾಗಿ ಕಾಳಸಂತೆಯಲ್ಲಿ ಖರೀದಿಸಿ, ದಾಸ್ತಾನು ಮಾಡಿದ್ದು, ದಾಸ್ತಾನು ಮಾಡಿದ್ದ 13.47 ಕ್ವಿಂಟಾಲ್ ಪಡಿತರ ಅಕ್ಕಿ ಮತ್ತು 12.16 ಕ್ವಿಂಟಾಲ್ ಪಡಿತರ ಗೋದಿಯನ್ನು ಅಕ್ರಮವಾಗಿ ಹೆಚ್ಚಿನ ಲಾಭಕ್ಕೆ ಮಾರಾಟ ಮಾಡುವ ಉದ್ದೇಶದಿಂದ ತನ್ನ ಬಾಬ್ತು ಕೆಎ-45-5143 ರ ನೊಂದಣಿಯ ಬುಲೆರೋ ಗೂಡ್ಸ್ ವಾಹನದಲ್ಲಿ ತುಂಬುತ್ತಿದ್ದುದು ಹಾಗೂ ಆರೋಪಿಯು ಕರ್ನಾಟಕ ಸರ್ಕಾರ ಪಡಿತರ ಚೀಟಿದಾರರಿಗೆ ಉಚಿತವಾಗಿ ನೀಡುತ್ತಿರುವ ಅಕ್ಕಿ ಮತ್ತು ಗೋದಿಯನ್ನು ಅಕ್ರಮವಾಗಿ ಖರೀದಿಸಿ ದಾಸ್ತಾನು ಮಾಡಿ ದುರ್ಬಳಕೆ ಮಾಡುವ ಮುಖೇನ ಸರ್ಕಾರಕ್ಕೆ ವಂಚನೆ ಮಾಡಿರುತ್ತಾರೆ. ಆ ಮೂಲಕ ಆರೋಪಿಗಳು **ಭಾರತ ದಂಡ ಸಂಹಿತೆ ಕಲಂ.420 ಮತ್ತು ಅಗತ್ಯ ವಸ್ತುಗಳ ಕಾಯ್ದೆ 3 ಮತ್ತು 7** ಅಡಿಯಲ್ಲಿ ಅಪರಾಧ ಮಾಡಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುವರೇ ?

**2 ನೇ ಅಂಶಃ** ಯಾವ ಆದೇಶ ?

**8.** ಮೇಲ್ಕಂಡ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿರುತ್ತೇನೆ.

ಅಂಶ-1: ನಕಾರಾತ್ಮಕವಾಗಿ

ಅಂಶ-2: ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ,

**ಕಾರಣಗಳು**

**9. ಅಂಶ-1**: ಅಭಿಯೋಗದವರ ವಾದದಂತೆ ದಿನಾಂಕ.18.06.2016 ರಂದು ಮಧ್ಯಾಹ್ನ 2.45 ಗಂಟೆಯ ಸಮಯದಲ್ಲಿ ಬೆಟ್ಟದಪುರ ಪೊಲೀಸ್ ಠಾಣಾ ಸರಹದ್ದು ಅತ್ತಿಗೋಡು ಗ್ರಾಮದ ಆರೋಪಿ ಪ್ರಶಾಂತ್ ರವರ ಮನೆಯಲ್ಲಿ ಚಾಸಾ.1 ರವರು ಚಾಸಾ.2 ಮತ್ತು 3 ರವರೊಂದಿಗೆ ಪಂಚಾಯ್ತಿದಾರರಾದ ಚಾಸಾ.4, 5 ಮತ್ತು 6 ರವರ ಸಮಕ್ಷಮ ದಾಳಿ ಮಾಡಿದ್ದು, ಆರೋಪಿಯು ಕರ್ನಾಟಕ ಸರ್ಕಾರದ ಪಡಿತರ ಚೀಟಿದಾರರಿಗೆ ಅನ್ನಭಾಗ್ಯ ಯೋಜನೆ ಅಡಿಯಲ್ಲಿ ಉಚಿತವಾಗಿ ನೀಡುತ್ತಿರುವ ಅಕ್ಕಿ ಮತ್ತು ಗೋದಿಯನ್ನು ಅಕ್ರಮವಾಗಿ ಕಾಳಸಂತೆಯಲ್ಲಿ ಖರೀದಿಸಿ, ದಾಸ್ತಾನು ಮಾಡಿದ್ದು, ದಾಸ್ತಾನು ಮಾಡಿದ್ದ 13.47 ಕ್ವಿಂಟಾಲ್ ಪಡಿತರ ಅಕ್ಕಿ ಮತ್ತು 12.16 ಕ್ವಿಂಟಾಲ್ ಪಡಿತರ ಗೋದಿಯನ್ನು ಅಕ್ರಮವಾಗಿ ಹೆಚ್ಚಿನ ಲಾಭಕ್ಕೆ ಮಾರಾಟ ಮಾಡುವ ಉದ್ದೇಶದಿಂದ ತನ್ನ ಬಾಬ್ತು ಕೆಎ-45-5143 ರ ನೊಂದಣಿಯ ಬುಲೆರೋ ಗೂಡ್ಸ್ ವಾಹನದಲ್ಲಿ ತುಂಬುತ್ತಿದ್ದುದು ಹಾಗೂ ಆರೋಪಿಯು ಕರ್ನಾಟಕ ಸರ್ಕಾರ ಪಡಿತರ ಚೀಟಿದಾರರಿಗೆ ಉಚಿತವಾಗಿ ನೀಡುತ್ತಿರುವ ಅಕ್ಕಿ ಮತ್ತು ಗೋದಿಯನ್ನು ಅಕ್ರಮವಾಗಿ ಖರೀದಿಸಿ ದಾಸ್ತಾನು ಮಾಡಿ ದುರ್ಬಳಕೆ ಮಾಡುವ ಮುಖೇನ

ಸರ್ಕಾರಕ್ಕೆ ವಂಚನೆ ಮಾಡಿರುತ್ತಾರೆಂದು ಅಭಿಯೋಗದವರು ವಾದ ಮಂಡಿಸಿರುತ್ತಾರೆ.

**10.** ಅಭಿಯೋಜನೆಯವರ ಆರೋಪಣೆಯನ್ನು ಸಾಬೀತುಪಡಿಸಲು ಈ ಪ್ರಕರಣದ ದೂರುದಾರರಾದ ಚಾಸಾ.1-ಡಾ.ಕೆ.ರಾಮೇಶ್ವರಪ್ಪ ರವರನ್ನು ಪ್ರಾಸಾ.2 ಎಂದು, ಈ ಪ್ರಕರಣದ ದಾಳಿ ಸಮಯಕ್ಕೆ ಸಹಕರಿಸಿದ ಚಾಸಾ.2 ರಿಂದ 6 ನೇ ಸಾಕ್ಷಿದಾರರನ್ನು ಕ್ರಮವಾಗಿ ಪ್ರಾಸಾ.3, 4, 1, 5 ಮತ್ತು 6 ಎಂದು, ಪಡಿತರ ಅಕ್ಕಿಯನ್ನು ಆರೋಪಿಗೆ ನೀಡುತ್ತಿದ್ದ ಚಾಸಾ.7 ಮತ್ತು 8 ರವರನ್ನು ಪ್ರಾಸಾ.7 ಮತ್ತು 8 ಎಂದು, ದಾಳಿ ಸಮಯದಲ್ಲಿ ಪಂಚರಾಗಿ ಸಹಕರಿಸಿದ ಚಾಸಾ.9 ರಿಂದ 11 ರವರನ್ನು ಪ್ರಾಸಾ.9 ರಿಂದ 11 ಎಂದು, ಕೃತ್ಯ ಸ್ಥಳದ ಪಂಚರಾದ ಚಾಸಾ.13 ಮತ್ತು 14 ರವರನ್ನು ಅನುಕ್ರಮವಾಗಿ ಪ್ರಾಸಾ.13 ಮತ್ತು 12 ಎಂದು, ಚಾಸಾ.15 ಮತ್ತು ಚಾಸಾ.16 ರವರು ವಾಹನದ ಅಮಾನತ್ ಮಹಜರ್ ಸಾಕ್ಷಿಯಾಗಿದ್ದು ಇವರನ್ನು ಪ್ರಾಸಾ.14 ಮತ್ತು 15 ಎಂದು, ಚಾಸಾ.18/ಚಿಕ್ಕಸ್ವಾಮಿ ರವರು ಈ ಪ್ರಕರಣದ ತನಿಖಾಧಿಕಾರಿಯಾಗಿದ್ದು, ಇವರನ್ನು ಪ್ರಾಸಾ.16 ಎಂದು ಸಾಕ್ಷಿಗೆ ಒಳಪಡಿಸಿರುತ್ತಾರೆ.

**11.** ಅಭಿಯೋಜನೆಯವರ ಆರೋಪಣೆಯನ್ನು ಸಾಬೀತುಪಡಿಸಲು ಈ ಪ್ರಕರಣದಲ್ಲಿ ಚಾಸಾ.4/ಪ್ರಾಸಾ.1-ಮೋಹನ್ ರವರನ್ನು ಸಾಕ್ಷಿಗೆ ಒಳಪಡಿಸಿರುತ್ತಾರೆ. ಈ ಸಾಕ್ಷಿ ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿಯ ಪರಿಚಯ ಇಲ್ಲ. ಸದರಿ ಪ್ರಕರಣದ ವಿಷಯ ತನಗೆ ಗೊತ್ತಿಲ್ಲ. ಚಾಸಾ.1 ರಿಂದ 3 ರವರ ಪರಿಚಯ ಇಲ್ಲ. ಆರೋಪಿ ಅಕ್ರಮವಾಗಿ ಸರ್ಕಾರದಿಂದ ವಿತರಣೆಯಾದ

ಅಕ್ಕಿ, ರಾಗಿ, ಗೋಧಿಯನ್ನು ಕಾಳ ಸಂತೆಯಲ್ಲಿ ಜನರಿಂದ ಕಡಿಮೆ ಬೆಲೆಗೆ ಕೊಂಡು ಸಂಗ್ರಹಿಸಿದ್ದ ವಿಷಯ ತನಗೆ ಗೊತ್ತಿಲ್ಲ. ಆ ಸಂಬಂಧ ಚಾಸಾ.1 ರಿಂದ 3 ರವರು ತನ್ನನ್ನು ಯಾವತ್ತೂ ಸಹ ಆರೋಪಿಯ ಮನೆಗೆ ಕರೆದುಕೊಂಡು ಹೋಗಿ ಯಾವುದೇ ದಾಳಿ ಮಾಡಿಲ್ಲ ಹಾಗೂ ಯಾವುದೇ ಅಕ್ಕಿ, ಗೋಧಿ ಹಾಗೂ ರಾಗಿಯನ್ನು ಮತ್ತು ವಾಹನವನ್ನು ಅಮಾನತ್ತುಪಡಿಸಿಕೊಂಡಿಲ್ಲ ಹಾಗೂ ಅಲ್ಲಿ ಯಾವುದೇ ಮಹಜರ್ ಕ್ರಮ ಜರುಗಿಸಿ ತನ್ನ ಸಹಿಯನ್ನು ಪಡೆದುಕೊಂಡಿಲ್ಲ. ಈ ಬಗ್ಗೆ ತಾನು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ. ತಾನು ಅತ್ತಿಗೂಡಿನಲ್ಲಿದ್ದಾಗ ಸುಮಾರು 3 ವರ್ಷದ ಹಿಂದೆ ಪೊಲೀಸರ ಹೇಳಿಕೆ ಮೇರೆಗೆ ಸಹಿ ಮಾಡಿರುವುದಾಗಿ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ.

**12.** ಸರ್ಕಾರಿ ಸಹಾಯಕ ಅಭಿಯೋಜಕರು ಮಾಡಿದ ಪಾಟೀ ಸವಾಲಿನಲ್ಲಿ, ಅಭಿಯೋಜನೆಯ ಪ್ರಕರಣವನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ.

**13.** ಅಭಿಯೋಜನೆಯವರ ಆರೋಪಣೆಯನ್ನು ಸಾಬೀತುಪಡಿಸಲು ಈ ಪ್ರಕರಣದಲ್ಲಿ ದೂರುದಾರರಾದ ಚಾಸಾ.1/ ಪ್ರಾಸಾ.2-ಡಾ.ಕೆ.ರಾಮೇಶ್ವರಪ್ಪ ರವರನ್ನು ಸಾಕ್ಷಿಗೆ ಒಳಪಡಿಸಿರುತ್ತಾರೆ. ಈ ಸಾಕ್ಷಿ ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ.18.6.2016 ರಂದು ಪಿರಿಯಾಪಟ್ಟಣ ತಾಲ್ಲೂಕು, ಬೆಟ್ಟದಪುರ ವ್ಯಾಪ್ತಿಯಲ್ಲಿ ಇಲಾಖೆಗೆ ಸಂಬಂಧಿಪಟ್ಟ ವಿಷಯಗಳ ಮೇಲೆ ಪರಿಶೀಲನೆ ನಡೆಸುತ್ತಿರುವ ವೇಳೆ ಬೆಟ್ಟದಪುರ ಹೋಬಳಿ, ಅತ್ತಿಗೋಡು ಗ್ರಾಮದಲ್ಲಿ ಪ್ರಕಾಶಶೆಟ್ಟಿ ಎಂಬುವವರ ಮಗ ಪ್ರಶಾಂತ ಎಂಬುವವರು ಸರ್ಕಾರದ ಅನ್ನಭಾಗ್ಯ ಯೋಜನೆಯಲ್ಲಿ ಪಡಿತರ ಚೀಟಿಯಲ್ಲಿ ಬಿಡುಗಡೆ ಮಾಡಿರುವ ಅಕ್ಕಿಯನ್ನು

ಅಕ್ರಮವಾಗಿ ಖರೀದಿಸಿ ಅವರ ಮನೆಯಲ್ಲಿ ದಾಸ್ತಾನು ಮಾಡಿ ಹೆಚ್ಚಿನ ಬೆಲೆಗೆ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವ ಮಾಹಿತಿ ಬಂದಿದ್ದು, ಅದರಂತೆ ಅವರು ತಕ್ಷಣ ಚಾಸಾ-02 ಮತ್ತು 03 ರವರಿಗೆ ಮಾಹಿತಿ ನೀಡಿ ಅತ್ತಿಗೋಡಿನಲ್ಲಿ ದಾಳಿ ನಡೆಸಲು ಸಹಕರಿಸಲು ಸೂಚಿಸಿದ್ದು, ನಂತರ ತಾನು ಆರೋಪಿಯ ಮನೆಯನ್ನು ಪತ್ತೇ ಹಚ್ಚಿ ಅಲ್ಲಿ ನಡೆಯುತ್ತಿದ್ದ ಚಟುವಟಿಕೆಗಳನ್ನು ವೀಕ್ಷಿಸುತ್ತಿದ್ದಾಗ, ತಾನು ಇದ್ದ ಅತ್ತಿಗೋಡು ಸ್ಥಳಕ್ಕೆ ಅವರಿಬ್ಬರೂ, ಪಂಚರರಾದ ಚಾಸಾ-4 ರಿಂದ 06 ರವರನ್ನು ಸಹ ಕರೆದುಕೊಂಡು ಮಧ್ಯಾಹ್ನ 2.30 ಗಂಟೆಗೆ ಬಂದಿರುವುದಾಗಿ ನಂತರ ದಾಳಿಯ ವಿಷಯವನ್ನು ಚಾಸಾ-2 ರಿಂದ 6 ರವರಿಗೆ ತಿಳಿಸಿ ಅವರೊಂದಿಗೆ ಅತ್ತಿಗೋಡಿನ ಕೇರಳಾಪುರ ರಸ್ತೆಯಲ್ಲಿರುವ ಮಾಹಿತಿ ಇದ್ದ ಒಂದು ಮನೆಯ ಮೇಲೆ ದಾಳಿ ಮಾಡಿದಾಗ ಮನೆಯ ಮುಂದೆ ಒಂದು ಬುಲೆರೋ ವಾಹನ ಸಂಖ್ಯೆಃ ಕೆಎ 45-5143 ಅಲ್ಲಿ ನಿಂತಿದ್ದು, ಅದನ್ನು ಪರಿಶೀಲನೆ ಮಾಡಲಾಗಿ ಅದರಲ್ಲಿ ತುಂಬಿದ ಚೀಲಗಳಿದ್ದು, ಮನೆಯಲ್ಲಿ ಯಾರು ಮಾಲೀಕರಿದ್ದೀರಿ ಎಂದು ಕೇಳಿದಾಗ ಆರೋಪಿಯು ಈ ಮನೆಯ ಮಾಲೀಕ ಎಂದು ತಿಳಿಸಿದ್ದು, ಬೊಲೇರೋ ವಾಹನದಲ್ಲಿ ಅಕ್ಕಿ ಹಾಗೂ ಗೋದಿ ಇರುವುದನ್ನು ತಿಳಿಸಿದ್ದು, ಈ ಅಕ್ಕಿ ಯಾವುದು ಎಂದು ಕೇಳಿದಾಗ ಆರೋಪಿತ ಚಿಕ್ಕಹನುಸೋಗೆ-ದೊಡ್ಡಹನುಸೋಗೆ ಗ್ರಾಮದ ಪಡಿತರ ಚೀಟಿದಾರರಿಂದ ಪ್ರತಿ ಕೆ.ಜಿ.ಗೆ 8 ರಿಂದ 10 ರೂ. ಗಳಂತೆ ಖರೀದಿ ಮಾಡಿ, ಅದನ್ನು ನುಚ್ಚು ಮಾಡಿ ಪಶು ಆಹಾರವನ್ನಾಗಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ತಂದಿರುವುದಾಗಿ, ಆಗ ವಾಹನವನ್ನು ಪರಿಶೀಲಿಸಿದಾಗ 13 ಚೀಲದಲ್ಲಿ ಅಕ್ಕಿ, 11 ಚೀಲದಲ್ಲಿ ಗೋಧಿ ಇರುವುದು ಕಂಡು ಬಂದಿದ್ದು, ಅನಂತರ

ಮನೆಯನ್ನು ಪರಿಶೀಲಿಸಿದಾಗ ಅಲ್ಲಿ ಕೋಣೆಗಳಲ್ಲಿ 11 ಚೀಲ ಅಕ್ಕಿ, 16 ಚೀಲ ಗೋಧಿ ಇರುವುದು ಕಂಡು ಬಂದಿದ್ದು, ಅಂತೆಯೇ ಅವರ ಬಳಿ ಎರಡು ಎಲೆಟ್ರಾನಿಕ್ ವಿದ್ಯುನ್ಮಾನ ತೂಕಮಾಪಕ ಇರುವುದು ಕಂಡುಬಂದಿದ್ದು, ಅವುಗಳನ್ನು ತೂಕ ಮಾಡಿ ನೋಡಿ ನಂತರ ಸದರಿ ಕೃತ್ಯವೂ ಕಾನೂನು ಬಾಹೀರವಾಗಿದ್ದರಿಂದ, ಮಧ್ಯಾಹ್ನ 02.45 ರಿಂದ 5.00 ರವರೆಗೆ ಮಹಜರ್ ಕ್ರಮವನ್ನು ಚಾಸಾ-2 ರಿಂದ 6, ಸಮಕ್ಷಮ ಜರುಗಿಸಿ, ಆರೋಪಿತನ ವಶದಿಂದ ಬುಲೆರೋ ವಾಹನ ಮತ್ತು ಎಲೆಟ್ರಾನಿಕ್ ವಿದ್ಯುನ್ಮಾನ ತೂಕಮಾಪಕ, 24 ಚೀಲ ಅಕ್ಕಿ, 27 ಚೀಲ ಗೋಧಿಯನ್ನು ವಶಪಡಿಸಿಕೊಂಡು, ನಂತರ ವಶಪಡಿಸಿಕೊಂಡ ಅಕ್ಕಿ ಮತ್ತು ಗೋಧಿಯನ್ನು ಚೀಲಗಳಿಂದ ಮಾದರಿಗಾಗಿ ತಲಾ ½ ಕೆ.ಜಿ.ಯ 4 ಪ್ಯಾಕೆಟ್ ಗಳನ್ನು ತೆಗೆದು, ಅದರಲ್ಲಿ ತಲಾ 2 ಪ್ಯಾಕೆಟ್ ಗಳನ್ನು ಪೊಲೀಸ್ ರವರಿಗೆ ದೂರು ನೀಡುವ ಸಂದರ್ಭದಲ್ಲಿ ಹಾಜರುಪಡಿಸಿ, ಸದರಿ ಸಂದರ್ಭದಲ್ಲಿ ಸ್ಯಾಂಪಲ್ಲಾಗಿ ತೆಗೆದ ಪ್ಯಾಕೆಟಗಳನ್ನು ಬಿಳಿ ಪಟ್ಟೆಯಿಂದ ಸುತ್ತಿ ಅರಗು ಹಾಕಿ ಪಿ.ಆರ್.ಓ ಎಂಬ ಅಕ್ಷರಗಳಿಂದ ಸೀಲು ಹಾಕಿ, ಬಿಳಿ ಹಾಳೆಯ ಮೇಲೆ ಪಂಚರರ ಸಹಿಗಳನ್ನು ಪಡೆದು ಅಂಟಿಸಿ, ಉಳಿದ ತಲಾ 2 ಪ್ಯಾಕೆಟ್ ಗಳನ್ನು ತಮ್ಮ ವಶದಲ್ಲಿಯೇ ಜಿಲ್ಲಾಧಿಕಾರಿಗಳಿಗೆ ಜರುಪಡಿಸುವ ಉದ್ದೇಶದಿಂದ ಇರಿಸಿಕೊಂಡಿದ್ದು, ಅದೇ ಸಮಯದಲ್ಲಿ ಸ್ಥಳದಲ್ಲಿ ಆರೋಪಿತ ಹೇಳಿಕೆಯನ್ನು ನೀಡಿದ್ದು, ನಂತರ ವಶಪಡಿಸಿಕೊಂಡ ಅಕ್ಕಿ ಮತ್ತು ಗೋಧಿಯನ್ನು, ಎರಡು ತೂಕಮಾಪಕವನ್ನು ಪಿರಿಯಾಪಟ್ಟಣ, ಟಿ. ಎ. ಪಿ. ಸಿ. ಎಂ. ಎಸ್. ಕಾರ್ಯದರ್ಶಿ ರವರಿಗೆ ಭದ್ರತೆಯ ದೃಷ್ಟಿಯಿಂದ ವಹಿಸಿ ಸ್ವೀಕೃತಿಯನ್ನು ಪಡೆದು, ನಂತರ ವಾಹನ ಮತ್ತು ತಲಾ

ಎರಡು ಸ್ಯಾಂಪಲ್ ಪ್ಯಾಕೆಟಗಳನ್ನು ಬೆಟ್ಟದಪುರ ಪೊಲೀಸರ ವಶಕ್ಕೆ ನೀಡಿದ್ದು, ನಂತರ ಬೆಟ್ಟದಪುರ ಪೋಲೀಸ್ ಠಾಣೆಗೆ ಅಗತ್ಯ ವಸ್ತುಗಳ ಕಾಯ್ದೆ ಅಡಿಯಲ್ಲಿ ದೂರನ್ನು ನೀಡಿ, ನಂತರ ವಾಹನ ಮತ್ತು ಮಾದರಿ ಪ್ಯಾಕೆಟ್ ಗಳನ್ನು ಪಂಚರರಾದ ಚಾಸಾ-13 ಮತ್ತು ಚಾಸಾ-16 ರವರ ಸಮಕ್ಷಮ ಪೊಲೀಸರು ಮಹಜರ್ ಕ್ರಮ ಜರುಗಿಸಿ ಅವುಗಳನ್ನು ಅಮಾನತ್ತುಪಡಿಸಿಕೊಂಡು, ನಂತರ ಬೆಟ್ಟದಪುರ ಪೊಲೀಸರು ಮುಂದಿನ ಕ್ರಮವನ್ನು ಜರುಗಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**14.** ಆರೋಪಿ ಪರ ವಕೀಲರು ಸದರಿ ಸಾಕ್ಷಿದಾರರನ್ನು ಪಾಟೀ ಸವಾಲು ಮಾಡಿರುವುದಿಲ್ಲ.

**15.** ಚಾಸಾ.2/ಪ್ರಾ.ಸಾ.3.ಸಣ್ಣಸ್ವಾಮಿ ಆಹಾರ ನಿರೀಕ್ಷಕರು, ಚಾಸಾ.3/ಪ್ರಾ.ಸಾ.4-ಟಿ.ಸಿ.ಜಗದೀಶ ಇವರನ್ನು ಅಭಿಯೋಜಕರು ಸಾಕ್ಷಿಗೆ ಒಳಪಡಿಸಿರುತ್ತಾರೆ. ಈ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ.18.6.2016 ರಂದು ಚಾಸಾ.1 ರವರು ಕರೆ ಮಾಡಿ ಅತ್ತಿಗೋಡು ಗ್ರಾಮದ ಪ್ರಕಾಶ್ ಶೆಟ್ಟಿ ರವರ ಮನೆಯಲ್ಲಿ ಪಡಿತರ ಕಾರ್ಡುದಾರರರಿಗೆ ವಿತರಿಸಿದ ಅಕ್ಕಿ ಮತ್ತು ಗೋಧಿಯನ್ನು ಅಕ್ರಮವಾಗಿ ದಾಸ್ತಾನು ಇಟ್ಟುಕೊಂಡಿರುವ ಬಗ್ಗೆ ಮಾಹಿತಿ ಬಂದಿದ್ದು, ದಾಳಿ ಮಾಡಲು ಪಂಚರೊಂದಿಗೆ ಬರಲು ಸೂಚಿಸಿದ ಮೇರೆಗೆ ಚಾಸಾ.4 ರಿಂದ 6 ರವರನ್ನು ಕರೆಸಿ, ವಿಷಯ ತಿಳಿಸಿ, ಪ್ರಕಾಶ್ ಟಿ. ರವರ ಮನೆಯ ಬಳಿ ಹೋಗಿ ಪರಿಶೀಲಿಸಲಾಗಿ ಅಲ್ಲಿ ಒಂದು ಬುಲೆರೋ ವಾಹನ ಸಂಖ್ಯೆ.ಕೆಎ-45-5143 ಇದ್ದು, ಅದರಲ್ಲಿ 13 ಚೀಲದ ಅಕ್ಕಿ ಮತ್ತು 11 ಚೀಲದ ಗೋಧಿ ಇರುವುದು ಕಂಡು ಬಂದಿದ್ದು, ತದ ನಂತರ ಮನೆಯನ್ನು ಪರಿಶೀಲಿಸಲಾಗಿ 11 ಅಕ್ಕಿ

ಚೀಲಗಳು ಮತ್ತು 16 ಗೋದಿ ಚೀಲಗಳು ಕಂಡು ಬಂದಿದ್ದು, ಸ್ಥಳದಲ್ಲಿ ತೂಕ ಮಾಡುವ ಯಂತ್ರಗಳು ಇರುವುದು ಕಂಡು ಬಂದಿದ್ದು, ಅವುಗಳ ಬಗ್ಗೆ ಪ್ರಶ್ನಿಸಲಾಗಿ ಆರೋಪಿತ ಚಿಕ್ಕಹನಸೋಗೆ ಮತ್ತು ದೊಡ್ಡಹನಸೋಗೆ ಗ್ರಾಮದ ಕಾರ್ಡುದಾರರಿಗೆ ಉಚಿತವಾಗಿ ಕೊಡುವ ಪಡಿತರ ಅಕ್ಕಿ ಮತ್ತು ಗೋಧಿ ಆಗಿದ್ದು, ಅವುಗಳನ್ನು ಖರೀದಿಸಿ ದಾಸ್ತಾನು ಮಾಡಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದಾಗಿ ಹಾಗೂ ಯಾವುದೇ ಪರವಾನಿಗೆ ಇರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಅವುಗಳ ಪೈಕಿ ಅರ್ಧ ಕೆಜಿಯ 4 ಪ್ಯಾಕೇಟ್ ನಂತೆ ಸ್ಯಾಂಪಲನ್ನು ಬೆಟ್ಟದ ಚೀಲದಲ್ಲಿ ಸಂಗ್ರಹಿಸಿ ದಾರದಿಂದ ಹೊಲೆದು ಪಿ ಆರ್ ಒ ಎಂಬುದಾಗಿ ಮುದ್ರೆ ಮಾಡಲಾಯಿತು ಎಂದು ನುಡಿದಿರುತ್ತಾರೆ. ಅಕ್ಕಿ ಮತ್ತು ಗೋಧಿ ದಾಸ್ತಾನನ್ನು ಕೆಡದಂತೆ ಸುರಕ್ಷಿತವಾಗಿಡಲು ಟಿ.ಎ.ಪಿ.ಸಿ.ಎಂ.ಎಸ್ ಪಿರಿಯಾಪಟ್ಟಣ ರವರಿಗೆ ಹಸ್ತಾಂತರಿಸಿರುವುದಾಗಿ ನುಡಿದಿರುತ್ತಾರೆ. ಸ್ಯಾಂಪಲ್ ಅಕ್ಕಿ ಮತ್ತು ಗೋಧಿಯನ್ನು, ಆರೋಪಿತನನ್ನು, ಬುಲೆರೋ ವಾಹನವನ್ನು ಬೆಟ್ಟದಪುರ ಪೊಲೀಸ್ ಠಾಣಾಧಿಕಾರಿಯ ವಶಕ್ಕೆ ನೀಡಿ ಚಾಸಾ.1 ರವರು ದೂರನ್ನು ಸಲ್ಲಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ಅವರು ತಮ್ಮ ಹೇಳಿಕೆಗಳನ್ನು ನೀಡಿರುವುದಾಗಿ ನುಡಿದಿರುತ್ತಾರೆ.

**16.** ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲಿನಲ್ಲಿ, ದಾಳಿ ಮಾಡುವ ಸಮಯಕ್ಕೆ ಗ್ರಾಮಸ್ಥರು ಇದ್ದರು, ಅವರನ್ನು ಈ ಪ್ರಕರಣದಲ್ಲಿ ಪಂಚರನ್ನಾಗಿ ಮಾಡಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ಆರೋಪಿತ ಅಲಸಂದೆ, ಹುರುಳಿ ಮತ್ತು ಇತರೆ ಆಹಾರ ಪದಾರ್ಥಗಳನ್ನು ಮಾರಾಟ ಮಾಡುತ್ತಾರೆ ಹಾಗೂ ಆಹಾರ ಪದಾರ್ಥಗಳನ್ನು ರೈತರಿಂದ ಖರೀದಿಸಿ ಮೈಸೂರಿಗೆ ಸರಬರಾಜು

ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಆರೋಪಿತ ಯಾವುದೇ ಅಪರಾಧ ಮಾಡಿಲ್ಲ ಮತ್ತು ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂಬುದನ್ನು ಅಲ್ಲಗಳೆದಿರುತ್ತಾರೆ.

**17.** ಈ ಪ್ರಕರಣದ ಚಾಸಾ.5-ಚಂದ್ರ ಮತ್ತು ಚಾಸಾ.6-ಜಗದೀಶ ರವರು ಕೃತ್ಯದ ದಾಳಿಗೆ ವೇಳೆ ಪಂಚಾಯಿತಿದಾರರಾದ ಸಾಕ್ಷಿಗಳಾಗಿದ್ದು, ಇವರುಗಳು ಪ್ರಾಸಾ.5 ಮತ್ತು ಪ್ರಾಸಾ.6 ರಂತೆ ಸಾಕ್ಷಿ ನುಡಿದಿದ್ದು, ಇವರುಗಳು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ-4 ಗೊತ್ತು, ಚಾಸಾ-6 ರವರು ಗೊತ್ತಿಲ್ಲ, ಆರೋಪಿತ ಗೊತ್ತಿಲ್ಲ, ಸುಮಾರು 7-8 ವರ್ಷಗಳ ಹಿಂದೆ ಕೂಲಿ ಕೆಲಸ ಮಾಡಿಕೊಂಡು ಬರುತ್ತಿರುವಾಗ ಪೊಲೀಸ್ ಠಾಣೆಯಲ್ಲಿ ತಮ್ಮ ಸಹಿ ಪಡೆದಿದ್ದು, ನಿಪಿ.1 ರಲ್ಲಿರುವ ಅಂಶಗಳು ತಮಗೆ ಗೊತ್ತಿಲ್ಲ. ಈ ಪ್ರಕರಣದ ಯಾವುದೇ ವಿಚಾರ ಗೊತ್ತಿಲ್ಲ. ತಾವು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದು ವ್ಯತಿರಿಕ್ತವಾಗಿ ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಗಳೆಂದು ಪರಿಗಣಿಸಿ ಮಾಡಿದ ಪಾಟೀ ಸವಾಲಿನಲ್ಲಿ ಸೂಚಿಸಿದ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ. ಅಭಿಯೋಜನೆಯು ಪ್ರಾಸಾ.5 ಮತ್ತು 6 ರವರನ್ನು ಪಾಟೀ ಸವಾಲು ಮಾಡಿದರೂ, ಪ್ರಕರಣವನ್ನು ಬೆಂಬಲಿಸುವಂತಹ ಯಾವುದೇ ಅಂಶಗಳನ್ನು ಹೊರತರಿಸುವಲ್ಲಿ ಅಭಿಯೋಜನೆಯು ವಿಫಲಗೊಂಡಿದೆ.

**18.** ಈ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರುಗಳಾದ ಚಾಸಾ.7-ಮೂಡ್ಲಯ್ಯ, ಚಾಸಾ.8-ಮೋಹನ, ಚಾಸಾ.9-ಚಂದ್ರ, ಚಾಸಾ.10-ಕುಮಾರ ಮತ್ತು ಚಾಸಾ.11-ದೇವರಾಜು ರವರನ್ನು ಪ್ರಾಸಾ.7 ರಿಂದ ಪ್ರಾಸಾ.11 ರಂತೆ ಸಾಕ್ಷಿ ನುಡಿದಿದ್ದು,

ಇವರುಗಳು ತಮ್ಮ ಮುಖ್ಯ ವಿಚಾರಣೆಯಲ್ಲಿ ತಮಗೆ ನ್ಯಾಯಾಲಯದ ಮುಂದಿರುವ ಆರೋಪಿ ಯಾರೆಂದು ಗೊತ್ತಿಲ್ಲ, ತಮಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ, ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ, ತಾವು ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದು ವ್ಯತಿರಿಕ್ತವಾಗಿ ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಗಳೆಂದು ಪರಿಗಣಿಸಿ ಮಾಡಿದ ಪಾಟೀ ಸವಾಲಿನಲ್ಲಿ ಸೂಚಿಸಿದ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ. ಅಭಿಯೋಜನೆಯು ಪ್ರಾಸಾ.5 ರಿಂದ ಪ್ರಾಸಾ.11 ರವರನ್ನು ಪಾಟೀ ಸವಾಲು ಮಾಡಿದರೂ, ಪ್ರಕರಣವನ್ನು ಬೆಂಬಲಿಸುವಂತಹ ಯಾವುದೇ ಅಂಶಗಳನ್ನು ಹೊರತರಿಸುವಲ್ಲಿ ಅಭಿಯೋಜನೆಯು ವಿಫಲಗೊಂಡಿದೆ.

**19.** ಈ ಪ್ರಕರಣದ ಮಹಜರ ಸಾಕ್ಷಿದಾರರುಗಳಾದ ಚಾಸಾ.14 ಮತ್ತು ಚಾಸಾ.13 ರವರುಗಳನ್ನು ಪ್ರಾಸಾ.12 ಮತ್ತು 13 ರಂತೆ ಸಾಕ್ಷಿ ನುಡಿದಿದ್ದು, ಇವರುಗಳು ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ, ಪೊಲೀಸರು ಯಾವುದೇ ಸ್ಥಳಕ್ಕೆ ಕರೆಸಿರಲಿಲ್ಲ, ತಮ್ಮ ಸಮಕ್ಷಮ ಮಹಜರ್ ಕ್ರಮ ಜರುಗಿಸಿ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ, ಸುಮಾರು 7 ವರ್ಷಗಳ ಹಿಂದೆ ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ತಮ್ಮ ಸಹಿ ಪಡೆದಿದ್ದರು, ನಿಪಿ.5 ಮತ್ತು 15 ರಲ್ಲಿರುವ ವಿಚಾರ ತಮಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಅಭಿಯೋಜಕರು ಪ್ರಾಸಾ.12 ಮತ್ತು 13 ರವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾಡಿದ ಪಾಟೀ ಸವಾಲಿನಲ್ಲೂ ಸಹ ದಿನಾಂಕ.18.6.2016 ರಂದು ಪೊಲೀಸರು ತಮ್ಮ ಸಮಕ್ಷಮ ನಿಪಿ.5 ರಂತೆ ಅಕ್ಕಿ,

ಗೋದಿ ಮತ್ತು ಬುಲೆರೋ ಗೂಡ್ಸ ವಾಹನವನ್ನು ಅಮಾನತ್ತುಪಡಿಸಿಕೊಂಡು ದಿನಾಂಕ.19.6.2016 ರಂದು ಪೊಲೀಸರು ಸ್ಥಳ ಮಹಜರನ್ನು ಜರುಗಿಸಿದರು ಎಂಬುದನ್ನು ಒಪ್ಪಿರುವುದಿಲ್ಲ. ಅಭಿಯೋಜನೆಯು ಪ್ರಾಸಾ.12 ರಿಂದ ಪ್ರಾಸಾ.13 ರವರನ್ನು ಪಾಟೀ ಸವಾಲು ಮಾಡಿದರೂ, ಪ್ರಕರಣವನ್ನು ಬೆಂಬಲಿಸುವಂತಹ ಯಾವುದೇ ಅಂಶಗಳನ್ನು ಹೊರತರಿಸುವಲ್ಲಿ ಅಭಿಯೋಜನೆಯು ವಿಫಲಗೊಂಡಿದೆ.

**20.** ಈ ಪ್ರಕರಣದ ವಾಹನವನ್ನು ಬಿಡುಗಡೆ ಮಾಡಿದ ಮಹಜರ್ ಸಾಕ್ಷಿದಾರರುಗಳಾದ ಚಾಸಾ.15 ಮತ್ತು 16 ರವರುಗಳನ್ನು ಪ್ರಾಸಾ.14 ಮತ್ತು ಪ್ರಾಸಾ.15 ರಂತೆ ಸಾಕ್ಷಿ ಮಾಡಿಸಿದ್ದು, ಇವರುಗಳು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ.22.07.2016 ರ ಸ್ಥಳ ಪಂಚನಾಮೆಯಲ್ಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು 8-9 ವರ್ಷಗಳ ಹಿಂದೆ ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ಹಾಕಿದ್ದು, ಯಾವ ಕಾರಣಕ್ಕೆ ಸಹಿ ಮಾಡಿರುತ್ತೇವೆ ಎಂದು ಗೊತ್ತಿಲ್ಲ, ತಮ್ಮ ಸಮಕ್ಷಮ ಮಹಜರು ಕ್ರಮ ಜರುಗಿಸಿಲ್ಲ, ತಮ್ಮ ಸಮಕ್ಷಮ ಯಾವುದೇ ವಾಹನವನ್ನು ಬಿಡುಗಡೆಗೊಳಿಸಿಲ್ಲ. ನಿಪಿ.16 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ ಎಂದು ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಗಳೆಂದು ಪರಿಗಣಿಸಿ ದಿನಾಂಕ.22.7.2016 ರಂದು ಪೊಲೀಸ್ ಠಾಣೆಯಲ್ಲಿ ಅಮಾನತ್ತು ಪಡಿಸಿಕೊಂಡಿದ್ದ ಬೊಲೆರೋ ವಾಹನವನ್ನು ಫೋಟೋ ತೆಗೆದು ಅದರ ಮಾಲೀಕರಿಗೆ ಪಂಚನಾಮೆ ಮಾಡಿ ಬಿಡುಗಡೆ ಮಾಡಿದರು ಎಂಬ ಸೂಚನೆಯನ್ನು ಒಪ್ಪಿಕೊಂಡಿರುವುದಿಲ್ಲ. ಅಭಿಯೋಜನೆಯು ಪ್ರಾಸಾ.14 ಮತ್ತು ಪ್ರಾಸಾ.15 ರವರನ್ನು ಪಾಟೀ ಸವಾಲು

ಮಾಡಿದರೂ, ಪ್ರಕರಣವನ್ನು ಬೆಂಬಲಿಸುವಂತಹ ಯಾವುದೇ ಅಂಶಗಳನ್ನು ಹೊರತರಿಸುವಲ್ಲಿ ಅಭಿಯೋಜನೆಯು ವಿಫಲಗೊಂಡಿದೆ.

**21.** ಚಾಸಾ.18/ಪ್ರಾಸಾ.16- ಚಿಕ್ಕಸ್ವಾಮಿ ರವರು ತನಿಖಾಧಿಕಾರಿ ಆಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 18.06.2016 ರಂದು ಸಂಜೆ 6.00 ಗಂಟೆ ಸಮಯದಲ್ಲಿ ಚಾಸಾ-1 ರವರು ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮ್ಮೆ ಸಂಖ್ಯೆ. 91/2016 ಕಲಂ 6(ಎ), 3, 7 ಅಗತ್ಯ ವಸ್ತುಗಳ ಕಾಯಿದೆ, ಕಲಂ 14, 18 ಕರ್ನಾಟಕ ಅಗತ್ಯ ವಸ್ತುಗಳ ನಿಯಂತ್ರಣ ಆದೇಶ, ಕಲಂ 4, 5, 8, 9 ಕರ್ನಾಟಕ ಅಗತ್ಯ ವಸ್ತುಗಳ ಲೆಕ್ಕ ಪತ್ರದ ನಿರ್ವಹಣಾ ಬೆಲೆ ಮತ್ತು ಆದೇಶ, ಕಲಂ 120(ಬಿ), 420 ಐ ಪಿ ಸಿ ಅಡಿಯಲ್ಲಿ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿ, ಅದೇ ದಿನ ಚಾಸಾ-1 ರವರು ಹಾಜರುಪಡಿಸಿದ ಅರ್ದ ಕೆ ಜಿ ಯಷ್ಟು 2 ಅಕ್ಕಿ ತುಂಬಿದ ಮಾದರಿ ಮತ್ತು ಅರ್ಧ ಕೆ ಜಿ ಯಷ್ಟು 2 ಗೋಧಿ ತುಂಬಿದ ಮಾದರಿ ಚೀಲಗಳನ್ನು ಹಾಗೂ ಕೃತ್ಯಕ್ಕೆ ಬಳಸಲಾದ ವಾಹನ ನಂ. ಕೆಎ-45-5143 ಅನ್ನು ಹಾಜರುಪಡಿಸಿದ್ದು, ಚಾಸಾ-13 ಮತ್ತು 14 ರವರ ಸಮಕ್ಷಮದಲ್ಲಿ ಸಂಜೆ 7.00 ರಿಂದ 7.30 ರವರೆಗೆ ಠಾಣಾ ಆವರಣದಲ್ಲಿ ಮಹಜರು ಮುಖಾಂತರ ಅಮಾನತ್ತು ಮಾಡಿಕೊಂಡು, ಅದೇ ದಿನ ಚಾಸಾ-3 ರಿಂದ 5 ರವರ ಹೇಳಿಕೆಗಳನ್ನು ಪಡೆದು, ನಂತರ ಆರೋಪಿತನನ್ನು ದಸ್ತಗಿರಿ ಕ್ರಮ ಜರುಗಿಸಿ, ವೈದ್ಯಕೀಯ ಪರೀಕ್ಷೆ ಮಾಡಿಸಿ ಸಿಬ್ಬಂದಿಗಳ ಸಹಾಯದಿಂದ ನ್ಯಾಯಾಲಯದ ಮುಂದೆ ಹಾಜರುಪಡಿಸಿ, ದಿನಾಂಕ.19.06.2016 ರಂದು ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ಪಂಚರಾದ

ಚಾಸಾ-13 ಮತ್ತು 14 ರವರ ಸಮಕ್ಷಮದಲ್ಲಿ ಚಾಸಾ-2 ರವರು ತೋರಿಸಿ ಕೊಟ್ಟ ಮೇರೆಗೆ ಸ್ಥಳದಲ್ಲಿ ಬೆಳಿಗ್ಗೆ 9.30 ರಿಂದ 10.30 ರವರೆಗೆ ಸ್ಥಳ ಮಹಜರು ಜರುಗಿಸಿ, ದಿನಾಂಕ.22.07.2016 ರಂದು ನ್ಯಾಯಾಲಯದ ಆದೇಶದಂತೆ ಕೃತ್ಯದಲ್ಲಿ ಭಾಗಿಯಾದ ವಾಹನವನ್ನು ಪಂಚರಾದ ಚಾಸಾ-15 ಮತ್ತು 16 ರವರ ಸಮಕ್ಷಮ ಮಹಜರು ಜರುಗಿಸಿ, ಫೋಟೋ ತೆಗೆದು ವಾಹನದ ಮಾಲೀಕರಿಗೆ ವಾಹನವನ್ನು ಬಿಡುಗಡೆ ಮಾಡಿ, ದಿನಾಂಕ.05.08.2016 ರಂದು ಚಾಸಾ-7 ರಿಂದ 12 ರವರ ಹೇಳಿಕೆಗಳನ್ನು ಪಡೆದುಕೊಂಡು, ದಿನಾಂಕ.13.02.2017 ರಂದು ಅಮಾನತ್ತು ಪಡಿಸಿಕೊಂಡ ಮಾದರಿ ಅಕ್ಕಿ ಮತ್ತು ಗೋಧಿಯನ್ನು ಪರಿಶೀಲಿಸಿ ವರದಿ ನೀಡುವಂತೆ ಆಹಾರ ನಿರೀಕ್ಷಕರು, ಪಿರಿಯಾಪಟ್ಟಣ ತಾಲ್ಲೂಕು ರವರಿಗೆ ಮನವಿ ಸಲ್ಲಿಸಿ, ದಿನಾಂಕ. 07.03.2017 ರಂದು ಸದರಿಯವರಿಂದ ವರದಿಯನ್ನು ಸ್ವೀಕರಿಸಿ, ಅಮಾನತ್ತು ಪಡಿಸಿಕೂಂಡ ಮಾಲುಗಳನ್ನು ಠಾಣಾ ಮಾಲು ಪಟ್ಟಿ ನಂ. 104/2016 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡು, ದಿನಾಂಕ. 07.03.2017 ರಂದು ಕೃತ್ಯ ನಡೆದ ಸ್ಥಳದ ಡಿಮ್ಯಾಂಡ್ ರಿಜಿಸ್ಟರ್ ಅನ್ನು ಪಡೆದು ಅದನ್ನು ಪರಿಶೀಲಿಸಿದಾಗ ಸದರಿ ಸ್ಥಳವು ಪ್ರಕಾಶ ಶೆಟ್ಟಿ ಬಿನ ಸಿದ್ದಲಿಂಗಶೆಟ್ಟಿ ರವರ ಹೆಸರಿನಲ್ಲಿರುತ್ತದೆ ಎಂದು ಕಂಡು ಬಂದಿದ್ದು, ಅದೇ ದಿನ ಆರೋಪಿತನ ವಿರುದ್ಧ ದೊಷಾರೋಪಣಾ ಪಟ್ಟಿ ಯನ್ನು ಸಲ್ಲಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ.

**22.** ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲಿನಲ್ಲಿ ಚಾಸಾ-1 ರವರು ಸಂಜೆ 6.00 ಗಂಟೆಗೆ ಠಾಣೆಗೆ ಹಾಜರಾಗಿ ತಮ್ಮ ದೂರನ್ನು ಸಲ್ಲಿಸಿದ್ದು, ಅವರೊಂದಿಗೆ ಅವರ ಸಿಬ್ಬಂದಿಗಳು ಬಂದಿದ್ದು, ಅವರು ನೀಡಿದ ದೂರನ್ನು

ಪರಿಶೀಲಿಸಿ, ಚಾಸಾ-1 ರವರು ತಮ್ಮ ದೂರಿನಲ್ಲಿ ಆರೋಪಿತ ಪಡಿತರಿಗೆ ನೀಡಿದಂತಹ ಅಕ್ಕಿ ಮತ್ತು ಗೋಧಿಯನ್ನು ಪಡೆದು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರು ಎಂದು ತಿಳಿಸಿದ್ದು, ತಮ್ಮ ದೂರಿನಲ್ಲಿ 13.47 ಕ್ವಿಂಟಾಲ್ ಅಕ್ಕಿ, 12.16 ಕ್ವಿಂಟಾಲ್ ಗೋಧಿ ಅಮಾನತ್ತು ಪಡಿಸಿಕೊಂಡ ಬಗ್ಗೆ ತಿಳಿಸಿದ್ದು, ಸದರಿ ಅಕ್ಕಿ ಮತ್ತು ಗೋಧಿಯು ಪಡಿತರಿಗೆ ಸೇರಿದ್ದು ಎಂದು ತಾನು ಪರಿಶೀಲಿಸಿಲ್ಲ, ಕಾರಣ ಆಹಾರ ನಿರೀಕ್ಷಕರೇ ಖಚಿತ ಮಾಹಿತಿ ನೀಡಿದ್ದರು. ದೂರನ್ನು ನೀಡಿದಾಗ ಪರಿಶೀಲಿಸಿ ಸ್ವೀಕರಿಸಬೇಕು ಎಂದು ಸೂಚಿಸಿದಾಗ ಪ್ರಾಸಾ.16 ರವರು ತಾವು ತಜ್ಞರಲ್ಲದ ಕಾರಣ ದೂರನ್ನು ಸ್ವೀಕರಿಸಿ ಆಹಾರ ನಿರೀಕ್ಷಕರಿಗೆ ಪರಿಶೀಲಿಸಿ ವರದಿ ನೀಡಲು ಕೋರಿರುವುದಾಗಿ ನುಡಿದಿರುತ್ತಾರೆ. ಮುಂದುವರೆದು ದೂರುದಾರರು ಆಹಾರ ನಿರ್ದೇಶಕರಾಗಿದ್ದು, ತಾನು ಮಾಲನ್ನು ಆಹಾರ ನಿರೀಕ್ಷಕರಿಂದ ಪರಿಶೀಲಿಸಿ ವರದಿಯನ್ನು ಸ್ವೀಕರಿಸಿರುವುದಾಗಿ ನುಡಿದಿರುತ್ತಾರೆ. ಚಾಸಾ-1 ರವರು ದೂರನ್ನು ನೀಡಿದ್ದು, ಚಾಸಾ-2 ರವರು ಮಾಲನ್ನು ಪರೀಕ್ಷಿಸಿ ವರದಿಯನ್ನು ನೀಡಿದ್ದು, ಚಾಸಾ-2 ರವರು ದಾಳಿ ಮಾಡಿದ್ದರು ಎಂದು ಒಪ್ಪಿಕೊಂಡಿದ್ದು, ಮು.ಮಾ-1 ರಿಂದ 4 ಅನ್ನು ತಾನು ಸ್ವೀಕರಿಸಿಲ್ಲ, ತಾನು ಠಾಣೆಯಲ್ಲಿ ಸ್ಥಳ ಮಹಜರನ್ನು ತಯಾರಿಸಿದ್ದೇನೆ, ತಾನು ಅಮಾನತ್ತು ಪಡಿಸಿಕೊಂಡ ಮಾಲುಗಳ ವರದಿ ಸ್ವೀಕರಿಸಿಲ್ಲ ಎಂಬುದನ್ನು ಅಲ್ಲಗಳೆದಿರುತ್ತಾರೆ. ಅಕ್ಕಿ, ಗೋಧಿ ಸಾಮಾನ್ಯವಾಗಿ ಎಲ್ಲಾ ಕಡೆ ದೊರೆಯುತ್ತದೆ ಎಂದು ಒಪ್ಪಿಕೊಂಡಿರುತ್ತಾರೆ.

**23.** ಅಭಿಯೋಜನೆಯವರ ವಾದದಂತೆ ಪ್ರಾಸಾ.1, 5 ರಿಂದ 14 ರವರು ದಾಳಿ ಹಾಗೂ ಮಹಜರ್ ಗಳ ಸಾಕ್ಷಿದಾರರಾಗಿರುತ್ತಾರೆ. ಅಂದರೆ ಪ್ರಾಸಾ. 1, 5

ರಿಂದ 14 ರವರು ಸ್ವತಂತ್ರ ಸಾಕ್ಷಿದಾರರಾಗಿದ್ದು, ಈ ಸಾಕ್ಷಿಗಳ ಮೇಲೆ ಮಾನ್ಯ ಅಭಿಯೋಜನೆಯ ವಾದವು ಅವಲಂಬಿತವಾಗಿರುತ್ತದೆ. ಕಾರಣ, ಪ್ರಾಸಾ.1, 5 ರಿಂದ 14 ರವರು ಸ್ವತಂತ್ರ ಸಾಕ್ಷಿಯಾಗಿದ್ದು, ಹೆಚ್ಚಿನ ಮಹತ್ವ ನೀಡುವಂತಹ ಸಾಕ್ಷಿಯಾಗಿರುತ್ತಾರೆ. ಒಂದು ಪಕ್ಷದಲ್ಲಿ, ಈ ಸಾಕ್ಷಿ ಅಭಿಯೋಜನೆಯ ಪ್ರಕರಣವನ್ನು ಬೆಂಬಲಿಸುವಂತೆ ಸಾಕ್ಷ್ಯ ನೀಡಿದ್ದರೆ, ಉಳಿದ ಸಾಕ್ಷಿಗಳಾದ ಪ್ರಾಸಾ.2 ರಿಂದ 4, ಪ್ರಾಸಾ.16 ರವರಿಗೆ ಪ್ರಾಮುಖ್ಯತೆಯನ್ನು ನೀಡಬಹುದು. ಅಂದರೆ, ಉಳಿದ ಸಾಕ್ಷಿಗಳಾದ ಪ್ರಾಸಾ.2 ರಿಂದ 4, ಪ್ರಾಸಾ.16 ರವರ ಸಾಕ್ಷ್ಯವು ಈ ಸಾಕ್ಷಿಯ ಸಾಕ್ಷ್ಯದ ಮೇಲೆ ಅವಲಂಬಿತವಾಗಿದೆ. ಪಂಚ ಸಾಕ್ಷಿಗಳು ಆರೋಪಿ ವಿರುದ್ದ ಸಾಕ್ಷ್ಯ ನೀಡಿದ್ದರೆ, ಆರೋಪಿ ಅಪರಾಧ ಮಾಡಿರುತ್ತಾರೆಂದು ಪರಿಗಣಿಸಬಹುದು. ಈ ಹಿನ್ನೆಲೆಯಲ್ಲಿ, ಈ ಸಾಕ್ಷಿದಾರರುಗಳ ಸಾಕ್ಷ್ಯವನ್ನು ಪರಿಗಣಿಸಿದಾಗ, ಆಹಾರ ಇಲಾಖೆಯ ಅಧಿಕಾರಿಗಳು ತಮ್ಮ ಸಮಕ್ಷಮ ಯಾವುದೇ ದಾಳಿ ಮಾಡಿಲ್ಲ, ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಹಾಗೂ ಸಹಿ ಮಾಡಿರುವ ದಾಖಲೆಗಳಲ್ಲಿ ಬರೆದಿರುವ ಅಂಶಗಳು ತಮಗೆ ಗೊತ್ತಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಹಾಗಾಗಿ ಈ ಸಾಕ್ಷಿದಾರರುಗಳನ್ನು ಮಾನ್ಯ ಅಭಿಯೋಜನೆಯು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲಿಗೆ ಒಳಪಡಿಸಿರುತ್ತಾರೆ. ಆದರೆ ತಮಗೆ ಪೂರಕವಾದಂತಹ ಸಾಕ್ಷ್ಯವನ್ನು ಪಡೆದುಕೊಳ್ಳಲು ವಿಫಲರಾಗಿರುತ್ತದೆ. ತಾವು ನೀಡಿದೆ ಎಂದು ಹೇಳಲಾದ ಹೇಳಿಕೆಯನ್ನು ಓದಿ ಹೇಳಿದರೂ ಕೂಡ ಅದನ್ನು ನಿರಾಕರಿಸುತ್ತಾ ಅಲ್ಲಗಳೆದಿರುತ್ತಾರೆ, ಹಾಗಾಗಿ ಈ ಸಾಕ್ಷಿದಾರರುಗಳು ಅಭಿಯೋಜನೆಯವರ ವಾದದಂತೆ ಸಾಕ್ಷಿ ನುಡಿದಿರುವುದಿಲ್ಲ.

**24.** ಮೇಲೆ ಹೇಳಿದ ಹಾಗೆ, ಆರೋಪಿ ಕೃತ್ಯ ಮಾಡಿರುತ್ತಾರೆಂದು ಹೇಳುವ ಸಮಯ ಫ್ರಾಸಾ.2 ರಿಂದ 4 ರವರು ತಮ್ಮ ಸಹೋದ್ಯೋಗಿಗಳೊಂದಿಗೆ ದಾಳಿ ನಡೆಸಿದಾಗ ಆರೋಪಿ ಅಕ್ರಮವಾಗಿ ಅಕ್ಕಿ ಮತ್ತು ಗೋಧಿಯನ್ನು ದಾಸ್ತಾನು ಹೊಂದಿದ್ದಾರೆ ಎಂದು ವಾದವಿರುತ್ತದೆ. ಆದರೆ ಸದರಿ ದಾಸ್ತಾನನ್ನು ಮಾರಾಟ ಮಾಡಿದವರಾಗಲಿ, ದಾಳಿ ಸಮಯಕ್ಕೆ ಸಹಕರಿಸಿದ ಸಾಕ್ಷಿದಾರರುಗಳಾಗಲಿ, ವಾಹನವನ್ನು ಬಿಡುಗಡೆ ಮಾಡಿದ ಸಂದರ್ಭದಲ್ಲಿ ಇದ್ದಂತಹ ಸಾಕ್ಷಿದಾರರಾಗಲಿ ಅಭಿಯೋಜನೆಗೆ ಪುಷ್ಟೀಕರಿಸುವಂತೆ ಸಾಕ್ಷಿ ನೀಡಿರುವುದಿಲ್ಲ. ಆದ್ದರಿಂದ ಆರೋಪಿ ಅಪರಾಧ ಮಾಡಿರುತ್ತಾರೆಂದು ರುಜುವಾತುಪಡಿಸಲು ಯಾವುದೇ ಸಮ್ಮತವಾದ ಸಾಕ್ಷ್ಯ ಕಂಡುಬರುತ್ತಿಲ್ಲ.

**25.** ಆದಾಗ್ಯೂ, ಘಟನೆ ನಡೆದ ಆಸು-ಪಾಸಿನಲ್ಲಿರುವ ವ್ಯಕ್ತಿಗಳನ್ನು ಸಾಕ್ಷಿಯಾಗಿ ಮಂಡಿಸಿರುವುದಿಲ್ಲ ಹಾಗೂ ಯಾವ ಕಾರಣಕ್ಕಾಗಿ ಅವರನ್ನು ಸಾಕ್ಷಿಯಾಗಿ ಮಂಡಿಸಿರುವುದಿಲ್ಲವೆಂದು ಸಮಂಜಸವಾದ ಉತ್ತರವನ್ನು ಸಹ ನೀಡಿರುವುದಿಲ್ಲ. ಅಮಾನತ್ತು ಪಡಿಸಿಕೊಂಡ ಬಗ್ಗೆ ಯಾವುದೇ ಭಾವ ಚಿತ್ರವನ್ನು ಹಾಜರುಪಡಿಸಿರುವುದಿಲ್ಲ. ಫ್ರಾಸಾ.16 ರವರು ತನಿಖಾಧಿಕಾರಿಯಾಗಿದ್ದು, ತಾನು ಆರೋಪಿತ 13.47 ಕ್ವಿಂಟಾಲ್ ಪಡೀತರ ಅಕ್ಕಿ ಮತ್ತು 12.16 ಕ್ವಿಂಟಾಲ್ ಪಡಿತರ ಗೋಧಿಯನ್ನು ಅಕ್ರಮವಾಗಿ ದಾಸ್ತಾನನ್ನು ಹೊಂದಿದ ಬಗ್ಗೆ ತಾನು ಖುದ್ದು ತನಿಖೆ ಮಾಡಿರುವುದಿಲ್ಲ. ಫ್ರಾಸಾ.2 ರಿಂದ 4 ರವರು ನೀಡಿದಂತಹ ಮಾದರಿ ಅಕ್ಕಿ ಮತ್ತು ಗೋಧಿಯನ್ನು ಮಾತ್ರ ಪಡೆದು ಅವರು ನೀಡಿದ ಹೇಳಿಕೆ ಮೇರೆಗೆ ಪ್ರಕರಣ ದಾಖಲಿಸಿರುತ್ತಾರೆ. ಫ್ರಾಸಾ.16 ರವರು ಮಾಡಿದಂತಹ ಸ್ಥಳ ಮಹಜರಿಗೆ

ಪೂರಕವಾಗಿ ಚಾಸಾ.13 ರವರು ಯಾವುದೇ ಸಾಕ್ಷ್ಯ ನೀಡಿರುವುದಿಲ್ಲ. ಮಾದರಿ ತೆಗೆದ ಅಕ್ಕಿ ಮತ್ತು ಗೋಧಿಯನ್ನು ಪರೀಕ್ಷೆಗಾಗಿ ಆಹಾರ ನಿರೀಕ್ಷಕರಿಗೆ ಕಳುಹಿಸಿದ್ದು, ಆಹಾರ ನಿರೀಕ್ಷಕರು ತಮ್ಮ ವರದಿಯಲ್ಲಿ ಸದರಿ ಸ್ಯಾಂಪಲ್ ಗಳು ಮೇಲ್ನೋಟಕ್ಕೆ ಪಡಿತರ ಅಕ್ಕಿ ಮತ್ತು ಗೋಧಿ ಎಂದು ದೃಡೀಕರಿಸಿದೆ ಎಂದು ವರದಿ ನೀಡಿದ್ದು, ಸದರಿ ಅಕ್ಕಿ ಮತ್ತು ಗೋಧಿಯು ಪಡಿತರ ಅಕ್ಕಿ ಮತ್ತು ಗೋಧಿ ಎಂದು ದೃಢವಾಗಿ ನಿರ್ದಾರಿಸಿರುವುದಿಲ್ಲ. ಸದರಿ ಆಹಾರ ನಿರೀಕ್ಷಕರು ಅಕ್ಕಿ ಮತ್ತು ಗೋಧಿಯನ್ನು ಪರೀಕ್ಷಿಸಲು ಪರಿಣತಿಯನ್ನು ಹೊಂದಿರುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಹಾಗಾಗಿ ಮೇಲೆ ವಿವರಿಸಿದ ಕಾರಣಗಳಿಂದ, ಆರೋಪಿ ಮೇಲೆ ಎಸಗಿರುವ ಆರೋಪಣೆಯನ್ನು ರುಜುವಾತುಪಡಿಸಲು ಅಭಿಯೋಜನೆಯು ವಿಫಲರಾಗಿರುತ್ತದೆ ಎಂದು ಪರಿಗಣಿಸಿ, ***ಅಂಶ.1 ನ್ನು ಈ ನ್ಯಾಯಾಲಯವು ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.***

**26.** **ಅಂಶ-2:** ಅಂಶ-1 ರಲ್ಲಿ ವಿವರಿಸಿದ ಕಾರಣದಿಂದ ಅಭಿಯೋಜನೆಯವರು ಆರೋಪಿಯ ಮೇಲೆ ಮಾಡಿದ ಆರೋಪಣೆಗಳನ್ನು ಸಾಬೀತು ಮಾಡಲು ವಿಫಲರಾಗಿರುತ್ತಾರೆಂದು ತೀರ್ಮಾನಿಸುತ್ತಾ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1)ರಡಿ ಆರೋಪಿಯನ್ನು ಭಾರತೀಯ ದಂಡ ಸಂಹಿತೆ ಕಲಂ 420 ಮತ್ತು ಅಗತ್ಯ ವಸ್ತುಗಳ ಕಾಯ್ದೆ ಕಲಂ 3 ಮತ್ತು 7 ರಡಿಯಲ್ಲಿ ಶಿಕ್ಷಾರ್ಹ

ಆರೋಪಗಳಿಂದ ದೋಷಮುಕ್ತರೆಂದು ಪರಿಗಣಿಸಿ ಬಿಡುಗಡೆ ಮಾಡಲಾಗಿದೆ.

ದಂಡ ಪ್ರಕ್ರಿಯ ಸಂಹಿತೆ ಕಲಂ.437(ಎ)ರಂತೆ ಆರೋಪಿ ಮತ್ತು ಜಾಮೀನುದಾರರ ಮುಚ್ಚಳಿಕೆ ಪತ್ರಗಳು ಈ ದಿನದಿಂದ 6 ತಿಂಗಳ ಕಾಲ ಅಥವಾ ಯಾವುದೇ ಮೇಲ್ಮನವಿಗೆ ಸಂಬಂಧಿಸಿದಂತೆ ನೋಟಿಸ್ ನೀಡುವವರೆಗೆ ಜಾರಿಯಲ್ಲಿರುತ್ತದೆ.

ಮು ಮಾ 1 ರಿಂದ 4 -ಅಕ್ಕಿ ಮತ್ತು ಗೋಧಿ ಪ್ಯಾಕೇಟಗಳನ್ನು ಮೇಲ್ಮನವಿಯ ಅವಧಿ ಮುಗಿದ ನಂತರ ನಾಶಪಡಿಸುವಂತೆ ಕಚೇರಿಗೆ ಆದೇಶಿಸಲಾಗಿದೆ.

ಪಿ ಎಫ್ ನಂ.104/2016 ರಲ್ಲಿ ನಮೂದಿಸಿರುವ ಐಟಂ ನಂ.3 ಬುಲೆರೋ ವಾಹನ ಸಂಖ್ಯೆ. ಕೆಎ-45 -5143 ಕ್ಕೆ ಸಂಬಂಧಿಸಿದಂತೆ ದಿನಾಂಕ.23.6.2016 ರಂದು ಮಾಡಿರುವಂತಹ ಆದೇಶವನ್ನು ಮೇಲ್ಮನವಿಯ ಅವಧಿ ಮುಗಿದ ನಂತರ ಖಾಯಂಗೊಳಿಸಲಾಗಿದೆ.

(ಶೀಘ್ರಲಿಪಿಗಾರರಿಗೆ ಗಣಕ ಯಂತ್ರದ ಮೂಲಕ ನೇರವಾಗಿ ಬೆರಳಚ್ಚು ಮಾಡಿಸಿ ಓದಿ ತಿದ್ದಿ ಇಂದು ಅಂದರೆ ದಿನಾಂಕ 7 ನೇ ಮಾರ್ಚ್ ಮಾಹೆ 2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

Digitally signed by SHWETHA JANARDHAN
Location: I Addl.Civil Judge and JMFC., Periyapatna

**(ಶ್ವೇತ.ಜೆ)**

**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.,**

**ಪಿರಿಯಾಪಟ್ಟಣ**

## ಅನುಬಂಧ

**ಅಭಿಯೋಜನೆಯವರ ಪರ ವಿಚಾರಣೆಗೊಳಪಡಿಸಿದ ಸಾಕ್ಷಿಗಳು:**

| | |
|---|---|
| ಪ್ರಾ.ಸಾ.1 | ಮೋಹನ್ |
| ಪ್ರಾ.ಸಾ.2 | ಡಾ.ಕೆ.ರಾಮೇಶವರಪ್ಪ |

| | |
|---|---|
| ಪ್ರಾಸಾ.3 | ಸಣ್ಣಸ್ವಾಮಿ |
| ಪ್ರಾಸಾ.4 | ಟಿ.ಸಿ.ಜಗದೀಶ |
| ಪ್ರಾಸಾ.5 | ಚಂದ್ರ |
| ಪ್ರಾಸಾ.6 | ಜಗದೀಶ |
| ಪ್ರಾಸಾ.7 | ಮೂಡ್ಲಯ್ಯ |
| ಪ್ರಾಸಾ.8 | ಮೋಹನ |
| ಪ್ರಾಸಾ.9 | ಚಂದ್ರ |
| ಪ್ರಾಸಾ.10 | ಕುಮಾರ |
| ಪ್ರಾಸಾ.11 | ದೇವರಾಜು |
| ಪ್ರಾಸಾ.12 | ಲೋಕೇಶ |
| ಪ್ರಾಸಾ.13 | ವಿದ್ಯಾಶಂಕರ |
| ಪ್ರಾಸಾ.14 | ಗಿರೀಗೌಡ |
| ಪ್ರಾಸಾ.15 | ಹೊನ್ನೇಗೌಡ |
| ಪ್ರಾಸಾ.16 | ಚಿಕ್ಕಸ್ವಾಮಿ |

**ಅಭಿಯೋಜನೆಯವರ ಪರ  ಗುರುತಿಸಲಾದ ದಾಖಲೆಗಳು:**

| | |
|---|---|
| ನಿಪಿ.1 | ದೂರು |
| ನಿಪಿ.1(ಎ) | ಪ್ರಾಸಾ.1 ರವರ ಸಹಿ |
| ನಿಪಿ.1(ಬಿ) | ಪ್ರಾಸಾ.2 ರವರ ಸಹಿ |
| ನಿಪಿ.1(ಸಿ) | ಪ್ರಾಸಾ.4 ರವರ ಸಹಿ |
| ನಿಪಿ.1(ಡಿ) | ಪ್ರಾಸಾ.4 ರವರ ಸಹಿ |
| ನಿಪಿ.1(ಇ) | ಪ್ರಾಸಾ.5 ರವರ ಸಹಿ |
| ನಿಪಿ.1(ಎಫ್ ) | ಪ್ರಾಸಾ.6 ರವರ ಸಹಿ |

| | |
|---|---|
| ನಿಪಿ.1(ಜಿ ) | ಪ್ರಾಸಾ.16 ರವರ ಸಹಿ |
| ನಿಪಿ.2 | ಹೇಳಿಕೆ |
| ನಿಪಿ.2(ಎ) | ಪ್ರಾಸಾ.2 ರವರ ಸಹಿ |
| ನಿಪಿ.2(ಬಿ) | ಪ್ರಾಸಾ.4 ರವರ ಸಹಿ |
| ನಿಪಿ.2(ಸಿ) | ಪ್ರಾಸಾ.4 ರವರ ಸಹಿ |
| ನಿಪಿ.3 | ದಾಸ್ತಾನು ಸ್ವೀಕೃತಿ |
| ನಿಪಿ.3(ಎ) | ಪ್ರಾಸಾ.2 ರವರ ಸಹಿ |
| ನಿಪಿ.3(ಬಿ) | ಪ್ರಾಸಾ.4 ರವರ ಸಹಿ |
| ನಿಪಿ.3(ಸಿ) | ಪ್ರಾಸಾ.4 ರವರ ಸಹಿ |
| ನಿಪಿ.3(ಡಿ ) | ಪ್ರಾಸಾ.16 ರವರ ಸಹಿ |
| ನಿಪಿ.4 | ದೂರು |
| ನಿಪಿ.4(ಎ) | ಪ್ರಾಸಾ.2 ರವರ ಸಹಿ |
| ನಿಪಿ.4(ಬಿ ) | ಪ್ರಾಸಾ.3 ರವರ ಸಹಿ |
| ನಿಪಿ.4(ಸಿ) | ಪ್ರಾಸಾ.16 ರವರ ಸಹಿ |
| ನಿಪಿ.5 | ಅಮಾನತ್ ಮಹಜರ್ |
| ನಿಪಿ.5(ಎ) | ಪ್ರಾಸಾ.2 ರವರ ಸಹಿ |
| ನಿಪಿ.5(ಬಿ) | ಪ್ರಾಸಾ.12 ರವರ ಸಹಿ |
| ನಿಪಿ.5(ಸಿ ) | ಪ್ರಾಸಾ.13 ರವರ ಸಹಿ |
| ನಿಪಿ.5(ಡಿ) | ಪ್ರಾಸಾ..16 ರವರ ಸಹಿ |
| ನಿಪಿ.6 | ವಾಹನದ ಛಾಯಾಚಿತ್ರ |
| ನಿಪಿ.6(ಎ) | ಪ್ರಾಸಾ.16 ರವರ ಸಹಿ |
| ನಿಪಿ.7 | ಸಿಡಿ |
| ನಿಪಿ.8 | ಪ್ರಾಸಾ.5 ರವರ ಹೇಳಿಕೆ |

| | |
|---|---|
| ನಿಪಿ.9 | ಪ್ರಾಸಾ.6 ರವರ ಹೇಳಿಕೆ |
| ನಿಪಿ.10 | ಪ್ರಾಸಾ.7 ರವರ ಹೇಳಿಕೆ |
| ನಿಪಿ.11 | ಪ್ರಾಸಾ.8 ರವರ ಹೇಳಿಕೆ |
| ನಿಪಿ.12 | ಪ್ರಾಸಾ.9 ರವರ ಹೇಳಿಕೆ |
| ನಿಪಿ.13 | ಪ್ರಾಸಾ.10 ರವರ ಹೇಳಿಕೆ |
| ನಿಪಿ.14 | ಪ್ರಾಸಾ.11 ರವರ ಹೇಳಿಕೆ |
| ನಿಪಿ.15 | ಸ್ಥಳ ಮಹಜರ್ |
| ನಿಪಿ.15(ಎ) | ಚಾಸಾ.12 ರವರ ಸಹಿ |
| ನಿಪಿ.15(ಬಿ) | ಚಾಸಾ.13 ರವರ ಸಹಿ |
| ನಿಪಿ.15(ಸಿ) | ಚಾಸಾ.16 ರವರ ಸಹಿ |
| ನಿಪಿ.16 | ಸ್ಥಳ ಮಹಜರ್ |
| ನಿಪಿ.16(ಎ) | ಪ್ರಾಸಾ.14 ರವರ ಸಹಿ |
| ನಿಪಿ.16(ಬಿ ) | ಪ್ರಾಸಾ.15 ರವರ ಸಹಿ |
| ನಿಪಿ.16(ಸಿ) | ಪ್ರಾಸಾ.16 ರವರ ಸಹಿ |
| ನಿಪಿ.17 | ಪ್ರಥಮ ವರ್ತಮಾನ ವರದಿ |
| ನಿಪಿ.17(ಎ) | ಪ್ರಾಸಾ.16 ರವರ ಸಹಿ |
| ನಿಪಿ.18 | ದೃಡೀಕೃತ ಡಿಮ್ಯಾಂಡ್ ರಿಜಿಸ್ಟರ್ |
| ನಿಪಿ.18(ಎ) | ಪ್ರಾಸಾ.16 ರವರ ಸಹಿ |
| ನಿಪಿ.19 | ಪರಿಶೀಲನಾ ವರದಿ |
| ನಿಪಿ.19(ಎ) | ಪ್ರಾಸಾ.16 ರವರ ಸಹಿ |
| ನಿಪಿ.20 | ಮಾಲುಪಟ್ಟಿ |
| ನಿಪಿ.20 (ಎ) | ಪ್ರಾಸಾ.16 ರವರ ಸಹಿ |

**<u>ಆರೋಪಿ ಪರ ವಿಚಾರಣೆಗೊಳಪಡಿಸಿದ ಸಾಕ್ಷಿಗಳು ಮತ್ತು ಗುರುತಿಸಲಾದ ದಾಖಲಾತಿಗಳು:</u>** **- ಇಲ್ಲ-**

**<u>ಅಭಿಯೋಜನೆಯವರ ಪರ ಗುರುತಿಸಲಾದ ಮುದ್ದೆ ಮಾಲುಗಳು:</u>**

ಮು ಮಾ 1 ರಿಂದ 4- ಅಕ್ಕಿ ಮತ್ತು ಗೋದಿ ಪ್ಯಾಕೇಟ್ ಗಳು

Digitally signed by SHWETHA JANARDHAN
Location: I Addl.Civil Judge and JMFC., Periyapatna

**(ಶ್ವೇತ.ಜೆ)**
**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದನ್ಯಾ.ದಂ.,**
**ಪಿರಿಯಾಪಟ್ಟಣ.**